ಈ) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಜನರಿದ್ದಾರೆ; ಎಷ್ಟು ಪರವಾನಗಿಗಳನ್ನು ನೀಡಲಾಗುವುದು; ವಿವರ ನೀಡುವುದು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

ಅ) ಈ ಬಗ್ಗೆ ಪ್ರಸ್ತಾವನೆ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಇರಬೇಕಾದ ಮದ್ಯದಂಗಡಿಗಳ ಸಂಖ್ಯೆಯನ್ನು (ಕೋಟಾ) ಜನಸಂಖ್ಯೆ ಮತ್ತು ಬೇಡಿಕೆ ಆಧಾರದ ಮೇಲೆ ನಿಗದಿಪಡಿಸಬೇಕಾಗಿದೆ. ಈ ಬಗೆಗಿನ ಪ್ರಸ್ತಾವನೆ ಸರ್ಕಾರದ ಪರಿಶೀಲೆಯಲ್ಲಿದೆ.

ಇ) ರಾಜ್ಯದಾದ್ಯಂತ ಸಿ ಎಲ್ - 9 ಸನ್ನದು ಮಂಜೂರು ಮಾಡಲು 283 ಅರ್ಜಿಗಳು ಹಾಗೂ ಸಿಎಲ್ -2 ಸನ್ನದು ಮಂಜೂರು ಮಾಡಲು 286 ಅರ್ಜಿಗಳು ಬಂದಿರುತ್ತವೆ.

ಈ) 2001 ರ ಜನಗಣತಿ ಪ್ರಕಾರ ಬಿಜಾಪುರ ಜಿಲ್ಲೆಯ ಜನಸಂಖ್ಯೆ 18.08,883 ಆಗಿರುತ್ತದೆ. ಸರ್ಕಾರವು ಸನ್ನದುಗಳ ಕೋಟಾ ನಿಗದಿಪಡಿಸಿದ ನಂತರ ಈ ಜಿಲ್ಲೆಗೆ ಸಂಬಂಧಿಸಿದಂತೆ ಹೊಸ ಪರವಾನಗಿಗಳ ಸಂಖ್ಯೆ ಇತ್ಯಾದಿ ವಿವರ ತಿಳಿಯುತ್ತದೆ.

ಬಿಜಾಪುರ ಗದಗ ಬ್ರಾಡ್ ಗೇಜ್ ರೈಲ್ವೆ ಪರಿವರ್ತನೆ ಯೋಜನೆ

2041 (2575) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನ ಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ - ಗದಗ್ ರೈಲ್ವೆ ಲೈನನ್ನು ಬ್ರಾಡ್ ಗೇಜ್‌ಗೆ ಪರಿವರ್ತಿಸುವ ಯೋಜನೆ ಯಾವ ಹಂತದಲ್ಲಿದೆ;

ಆ) ಈ ಕಾಮಗಾರಿಗಾಗಿ ಕೆ- ರೈಡ್ ಯೋಜನೆಯಡಿ ಕೇಂದ್ರದಿಂದ ಶೇ. 20 ರಷ್ಟು ಬರಲಿದ್ದು ಶೇ 20 ರಷ್ಟು ಹಣವನ್ನು ಭರಿಸಲು ಸರ್ಕಾರ ಸಿದ್ಧವಿದೆಯೇ;

ಇ) ಇನ್ನುಳಿದ ಶೇ 60 ರಷ್ಟು ಹಣವನ್ನು ಸಾಲರೂಪದಲ್ಲಿ ಪಡೆಯಲು ಸರ್ಕಾರ ಉದ್ದೇಶಿಸಿದೆಯೇ?

ಈ) ಈ ಬ್ರಾಡ್ ಗೇಜ್ ಮಾರ್ಗ ಪರಿವರ್ತನೆಯ ಕೆಲಸವನ್ನು ಯಾವಾಗ ಹಮ್ಮಿಕೊಳ್ಳಲಾಗುವುದು?

ಶ್ರೀ ಟಿ. ಜಾನ್ (ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನ ಯಾನ ರಾಜ್ಯ ಸಚಿವರು):

ಅ) ರೈಲ್ವೆ ಮಂತ್ರಾಯ ಮತ್ತು ಕರ್ನಾಟಕ ಸರ್ಕಾರವು 2000ನೇ ಇಸ್ವಿಯಲ್ಲಿ ಸಹಿ ಮಾಡಿದ ತಿಳುವಳಿಕೆ ಒಪ್ಪಂದ (MoU) ದಲ್ಲಿರುವ ನಾಲ್ಕು ಯೋಜನೆಗಳಲ್ಲಿ ಇದೂ ಒಂದಾಗಿದೆ.ಈ ಯೋಜನೆಯು ಈಗಾಗಲೇ ಕಾರ್ಯಗತಗೊಳ್ಳುತ್ತಿದೆ.

ಆ) ರೈಲ್ವೆ ಮತ್ತು ರಾಜ್ಯ ಸರ್ಕಾರಗಳು ಈ ಯೋಜನೆಗೆ 50:50 ವೆಚ್ಚ ಪಾಲುದಾರಿಕೆ ಆಧಾರದ ಮೇಲೆ ಹಣವನ್ನು ಹೂಡಲು ಒಪ್ಪಿಕೊಳ್ಳಲಾಗಿದೆ. ಅದರಂತೆ ರಾಜ್ಯ ಸರ್ಕಾರವು 2002-03ನೇ ಸಾಲಿನ ಆಯವ್ಯಯದಲ್ಲಿ ರೂ. 20 ಕೋಟಿಗಳನ್ನು ಒದಗಿಸಿದೆ.

ಇ) "ಉದ್ಭವಿಸುವುದಿಲ್ಲ"

ಈ) ಈ ಯೋಜನೆಯು ಈಗಾಗಲೇ ಕಾರ್ಯಗತಗೊಳ್ಳುತ್ತಿದೆ, ಬಲಿಜಾಪುರ - ಭಾಗಲಕೋಟೆ ವಿಭಾಗದ ಕಾಮಗಾರಿಯು ಪ್ರಗತಿಯಲ್ಲಿದೆ.

ಬಸವನಬಾಗೇವಾಡಿ ಸಾರಿಗೆ ಸಂಸ್ಥೆ ಡಿಪೋ ಕಾಮಗಾರಿ

2042 (2576) - ಶ್ರೀ ಬೆಳ್ಳುಬ್ಬಿ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿಯಲ್ಲಿ ಸಾರಿಗೆ ಸಂಸ್ಥೆಯ ಡಿಪೋ ಕಾಮಗಾರಿ ಕೆಲಸ ಯಾವಾಗಿನಿಂದ ಪ್ರಾರಂಭಿಸಲಾಗುವುದು;

ಆ) ಇದಕ್ಕಾಗಿ ಟೆಂಡರನ್ನು ಕರೆಯಲಾಗಿದೆಯೇ; ಟೆಂಡರ್ ಕರೆಯಲು ವಿಳಂಬಕ್ಕೆ ಕಾರಣವೇನು;

ಇ) ಎಷ್ಟು ಅವಧಿಯೊಳಗೆ ಈ ಕಾಮಗಾರಿ ಕೆಲಸವನ್ನು ಮುಗಿಸಲಾಗುತ್ತದೆ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಮಾರ್ಚ್ 2003ರಲ್ಲಿ ಬಸವನಬಾಗೇವಾಡಿ ಬಸ್ ಘಟಕದ ಕಾಮಗಾರಿಯನ್ನು ಪ್ರಾರಂಭಿಸುವಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

ಆ) ಬಸವನ ಬಾಗೇವಾಡಿಯಲ್ಲಿ ಬಸ್ ಘಟಕ ನಿರ್ಮಾಣಕ್ಕಾಗಿ ದಿನಾಂಕ: 19-07-2002 ರಂದು ನಿವೇಶನವನ್ನು ಸಂಸ್ಥೆಯ ವಶಕ್ಕೆ ಪಡೆದಿದ್ದು, ನಿವೇಶನವನ್ನು ಸಂಸ್ಥೆಯ ವಶಕ್ಕೆ ಪಡೆದ ನಂತರ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿ ತಾಂತ್ರಿಕ ಒಪ್ಪಿಗೆಯ ನಂತರ, ದಿನಾಂಕ: 24-12-02 ರಂದು ಟೆಂಡರ್ ಕರೆಯಲಾಗಿದೆ. ಟೆಂಡರ್ ಕರೆಯುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.

ಇ) ಕಾಮಗಾರಿ ಪ್ರಾರಂಭಗೊಂಡು 12 ತಿಂಗಳೊಳಗಾಗಿ (3 ತಿಂಗಳು ಮಳೆಗಾಲ ಹೊರತುಪಡಿಸಿ) ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಬಿಜಾಪುರ ವಿಭಾಗದ ಅಧೀನದಲ್ಲಿರುವ ಸಾರಿಗೆ ಡಿಪೋಗಳು

2043 (2577) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ವಿಭಾಗದ (ವಾಯುವ್ಯ ಸಾರಿಗೆ ಸಂಸ್ಥೆಯ) ಅಧೀನದಲ್ಲಿದ್ದ ವಿವಿಧ ಸಾರಿಗೆ ಡಿಪೋಗಳಾವುವು;

ಆ) ಬಿಜಾಪುರ ಜಿಲ್ಲೆಯನ್ನು ಎರಡು ಜಿಲ್ಲೆಗಳಾಗಿ ಪರಿವರ್ತಿಸಿದ ನಂತರ ಜಿಲ್ಲೆಗಳ ವ್ಯಾಪ್ತಿಗೆ ಬಂದ ಡಿಪೋಗಳು ಯಾವುವು;

ಇ) ಮುಧೋಳ್, ಜಮಖಂಡಿ ಹಾಗೂ ಮುದ್ದೇಬಿಹಾಳ್ ಡಿಪೋಗಳು ಯಾವ ಜಿಲ್ಲೆಯ ಅಧೀನಕ್ಕೊಳಪಟ್ಟಿದೆ;

ಈ) ರಸ್ತೆ ಸಾರಿಗೆ ಸಂಸ್ಥೆಯ ಆಡಳಿತ ಅಧೀನದಲ್ಲಿ ಯಾವ ಯಾವ ವಿಭಾಗಕ್ಕೆ ಸೇರಿಸಲಾಗಿದೆ.

ಉ) ಆಯಾ ವಿಭಾಗಗಳಡಿ ಡಿಪೋಗಳನ್ನು ಆಯಾ ಜಿಲ್ಲೆಗಳ ಅಧೀನದ ತಾಲ್ಲೂಕುಗಳಿಗೆ ಒಳಪಡಿಸಲು ಸರ್ಕಾರಕ್ಕಿರುವ ತೊಂದರೆ ಏನು?